ನಿಮ್ಮಲ್ಲಿ ಮರಣಶಯ್ಯೆಯಲ್ಲಿರುವವರಿಗೆ 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಯಾರೂ ಇಲ್ಲ) ಎಂದು ಹೇಳಿಕೊಡಿರಿ

ಅಬೂ ಸಈದ್ ಅಲ್-ಖುದ್ರಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಮ್ಮಲ್ಲಿ ಮರಣಶಯ್ಯೆಯಲ್ಲಿರುವವರಿಗೆ 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಯಾರೂ ಇಲ್ಲ) ಎಂದು ಹೇಳಿಕೊಡಿರಿ."
[صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪ್ರೇರೇಪಿಸುವುದೆನೆಂದರೆ, ಯಾರಿಗೆ ಮರಣದ ಸನ್ನಿವೇಶ (ಸಾವು) ಸಮೀಪಿಸಿದೆಯೋ, ಅವರ ಮುಂದೆ ನಾವು ತೌಹೀದ್ನ ವಾಕ್ಯವಾದ "ಲಾ ಇಲಾಹ ಇಲ್ಲಲ್ಲಾಹ್" ಅನ್ನು ಹೇಳಬೇಕು ಮತ್ತು ಪುನರಾವರ್ತಿಸಬೇಕು. ಅವರು ಅದನ್ನು ಹೇಳುವವರೆಗೆ (ಹೀಗೆ ಮಾಡಬೇಕು). ಅದು ಅವರ ಕೊನೆಯ ಮಾತಾಗಲಿ ಎಂಬ ಉದ್ದೇಶದಿಂದ.

http://www.sunnah.global/hadeeth/kn/show/65546